**U.S. Consulate General Chennai**

**Press Release**

220, Anna Salai, Gemini Circle, Chennai 600 006
Phone: +914428574181 | Email: ChennaiPressMbox@state.gov
https://in.usembassy.gov/embassy-consulates/chennai/ | usconsulatechennai
chennai.usconsulate | USAndChennai | AmConGenChennai | USConsulateChennai

## ಭಾರತೀಯ ಮೂಲದ ಗಣ್ಯರ ಜತೆಗೂಡಿ ಅಮೇರಿಕ- ಭಾರತ ಬಾಂಧವ್ಯದ 75 ವರ್ಷಗಳ ಸಂಭ್ರಮಾಚರಣೆ

**ಚೆನ್ನೈ**- ಭಾರತದಲ್ಲಿನ ಯು.ಎಸ್. ಮಿಷನ್ (ನವದೆಹಲಿಯ ರಾಯಭಾರ ಕಚೇರಿ ಮತ್ತು ಮುಂಬೈ, ಚೆನ್ನೈ, ಕೊಲ್ಕತಾ ಹಾಗೂ ಹೈದರಾಬಾದ್‌ನ ದೂತಾವಾಸಗಳು) ಅಮೇರಿಕ- ಭಾರತ ಬಾಂಧವ್ಯದ 75ನೇ ವರ್ಷಸಂಭ್ರಮಾಚರಣೆಗೆ ಹಲವು ಗಣ್ಯರು ನೀಡಿರುವ ಸಂದೇಶದ ವಿಡಿಯೋ ಬಿಡುಗಡೆ ಮಾಡಿದೆ. ವಿಡಿಯೋದಲ್ಲಿ ಕೆಲವು ಅಪ್ರತಿಮ, ನಿಪುಣ ಭಾರತೀಯ ಮೂಲದ ಅಮೆರಿಕನ್ನರು ಹಾಗೂ ಅಮೆರಿಕದಲ್ಲಿರುವ ಭಾರತೀಯ ಖ್ಯಾತನಾಮರನ್ನು ಒಳಗೊಂಡಿದ್ದು, ಅವರ ಗಮನಾರ್ಹ ಕೊಡುಗೆಗಳು ಕಳೆದ ೭೫ ವರ್ಷಗಳಲ್ಲಿ ಅಮೇರಿಕದಲ್ಲಿರುವ ಭಾರತೀಯರ ಯಾನವನ್ನು ಪ್ರತಿಬಿಂಬಿಸುತ್ತವೆ. ಈ ಪೂರ್ಣ ವಿಡಿಯೋವನ್ನು ಇಲ್ಲಿ ವೀಕ್ಷಿಸಬಹುದು: https://youtu.be/QO-wnWlbRbo

ಚಾರ್ಜ್ ಡಿ ಅಫೇರ್ಸ್ ಪೆಟ್ರೀಷಿಯಾ ಲಸಿನಾ, "ಅಮೇರಿಕ- ಭಾರತ ಸಹಭಾಗಿತ್ವದ ಮೂಲವು ಅಮೇರಿಕನ್ನರು ಮತ್ತು ಭಾರತೀಯರು ಹಲವಾರು ವರ್ಷಗಳಿಂದ ಒಡಗೂಡಿ ನಡೆಸಿದ ಅಧ್ಯಯನ, ಉದ್ಯೋಗ, ವಾಸ ಹಾಗೂ ಕಲಿಕೆಗಳಿಂದ ರೂಪುಗೊಂಡ ವೈಯಕ್ತಿಕ ಸ್ನೇಹದ ನೆಲೆಗಟ್ಟಿನ ಮೇಲೆ ನಿಂತಿದೆ.

ಈ ವಿಡಿಯೋಗೆ ಕೊಡುಗೆ ನೀಡಿರುವವರು ತಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ಉತ್ತುಂಗದಲ್ಲಿದ್ದು, ಜನರ ನಡುವಣ ಸಂಪರ್ಕಗಳು ಎರಡೂ ದೇಶಗಳು ಅಭಿವೃದ್ಧಿ ಹೊಂದಲು ನೆರವಾಗಿರುವುದನ್ನು ಎತ್ತಿ ತೋರಿಸುತ್ತದೆ" ಎಂದರು.

ಈ ವಿಡಿಯೋ(ಅನುಕ್ರಮದಲ್ಲಿ)ದಲ್ಲಿ: ಟೆನ್ನಿಸ್ ರಾಯಭಾರಿ, ದಾನಿ ಮತ್ತು ಚಿತ್ರ ನಿರ್ಮಾಪಕ **ಅಶೋಕ್ ಅಮೃತ್‌ರಾಜ್**; ಲೇಖಕ ಹಾಗೂ ವೆಲ್‌ನೆಸ್ ತಜ್ಞ **ಡಾ.ದೀಪಕ್ ಛೋಪ್ರಾ**; ಹೋರಾಟಗಾರ್ತಿ, ಪ್ರಥಮ ಭಾರತೀಯ ಮಿಸ್ ಅಮೆರಿಕಾ ಮತ್ತು ನಟಿ **ನಿನಾ ದವುಲೂರಿ**; ಸಿಎನ್‌ಎನ್ ಚೀಫ್ ಮೆಡಿಕಲ್ ಕರೆಸ್ಪಾಂಡೆಂಟ್ **ಡಾ.ಸಂಜಯ್ ಗುಪ್ತಾ**; ತಬಲಾ ವಿದ್ವಾಂಸ, ಸಂಗೀತ ಸಂಯೋಜಕ ಹಾಗೂ ಸಂಗೀತ ರಾಯಭಾರಿ **ಝಾಕಿರ್ ಹುಸೇನ್**; ಆಹಾರ ಮತ್ತು ಪ್ರವಾಸ ಕಥನಗಳ ಲೇಖಕ **ಮಧುರ್ ಜಾಫ್ರೀ;** ನಟಿ, ನಿರ್ಮಾಪಕಿ ಮತ್ತು ದಾನಿ **ಪ್ರಿಯಾಂಕ ಛೋಪ್ರಾ ಜೋನಸ್**; ಟೆಲಿವಿಷನ್ ನಿರೂಪಕಿ, ನಿರ್ಮಾಪಕಿ, ಫುಡ್ ಎಕ್ಸ್‌ಪರ್ಟ್ ಮತ್ತು ಲೇಖಕಿ **ಪದ್ಮ ಲಕ್ಷ್ಮಿ**; ಹಾಸ್ಯಗಾರ, ನಟ ಮತ್ತು ಟೆಲಿವಿಷನ್ ಫುಡ್ ಎಕ್ಸ್‌ಪರ್ಟ್ **ಆಸಿಫ್ ಮಂಡ್ವಿ**; ಲೇಖಕ ಮತ್ತು ಪತ್ರಕರ್ತ **ಸುಕೇತು ಮೆಹ್ತಾ**; ಯು.ಎಸ್.ಸರ್ಜನ್ ಜನರಲ್ **ಡಾ.ವಿವೇಕ್ ಮೂರ್ತಿ**; ಚಿತ್ರ ನಿರ್ದೇಶಕಿ ಮತ್ತು ನಿರ್ಮಾಪಕಿ **ಮೀರಾ ನಾಯರ್**; ಪೆಪ್ಸಿಕೊ ಮಾಜಿ ಅಧ್ಯಕ್ಷೆ ಮತ್ತು ಸಿಇಒ ಹಾಗೂ ಲೇಖಕಿ **ಇಂದ್ರಾ ನೂಯಿ**; 2019 ಸ್ಕ್ರಿಪ್ಸ್ ಸ್ಪೆಲ್ಲಿಂಗ್ ಬೀ ಚಾಂಪಿಯನ್ **ಶೃತಿಕಾ ಪಧಿ**; 2020 ಟೈಮ್ ಮ್ಯಾಗಝಿನ್ ಕಿಡ್ ಆಫ್ ದಿ ಇಯರ್, ವಿಜ್ಞಾನಿ ಮತ್ತು ಸಂಶೋಧಕಿ **ಗೀತಾಂಜಲಿ ರಾವ್** ಇದ್ದಾರೆ.

ಜನರಿಂದ ಜನರ ನಡುವಿನ ಬಾಂಧವ್ಯಗಳು ಅಮೇರಿಕ- ಭಾರತ ಬಾಂಧವ್ಯದ ಮೂಲಾಧಾರವಾಗಿವೆ. 2019ರಲ್ಲಿ 15 ದಶಲಕ್ಷ ಭಾರತೀಯರು ಅಮೇರಿಕ ಪ್ರಯಾಣಿಸಿದ್ದಾರೆ ಮತ್ತು ಭಾರತಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ

ಅಮೆರಿಕನ್ನರು ೨ನೇ ಸ್ಥಾನದಲ್ಲಿದ್ದರೆ. ಸುಮಾರು 200,000 ಭಾರತೀಯ ವಿದ್ಯಾರ್ಥಿಗಳು ಅಮೇರಿಕದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದು, ತಮ್ಮ ಇರವಿನಿಂದ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳನ್ನು ಶ್ರೀಮಂತಗೊಳಿಸಿದ್ದಾರೆ. ಸುಮಾರು ನಾಲ್ಕು ದಶಲಕ್ಷ ಭಾರತೀಯ ಅಮೆರಿಕನ್ನರಿದ್ದು ಅಮೇರಿಕದಲ್ಲಿ ವಲಸಿಗರು ಸ್ಥಾಪಿಸಿದ ಒಟ್ಟಾರೆ ಸ್ಟಾರ್ಟಪ್‌ಗಳಲ್ಲಿ ಮೂರನೇ ಒಂದರಷ್ಟು ಭಾರತೀಯ ಸಂಸ್ಥಾಪಕರನ್ನು ಹೊಂದಿವೆ.
ಭಾರತದಲ್ಲಿನ ಯು.ಎಸ್. ಮಿಷನ್ ಇಡೀ ವರ್ಷ ದೇಶಾದ್ಯಂತ ಹಲವಾರು ಕಾರ್ಯಕ್ರಮಗಳ ಮೂಲಕ 75ನೇ ವಾರ್ಷಿಕೋತ್ಸವ ಸಂಭ್ರಮಾಚರಣೆ ಮಾಡಲಿದೆ.

***